170)ಆರೋಗ್ಯ ವಿಮಲರಾಜು
171)ವಿಮನ ವೇಲು
172)ಕಾವೇರಿಯಪ್ಪ
173)ಟಿ.ವಿ.ಎಸ್. ಮಣಿ
174)ಗೋವಿಂದಪ್ಪ
175)ಸಿಂಗಪ್ಪ
176)ಪ್ರದೇಪ್
177)ಪುರುಶೋತ್ತಮನ್
178)ಚಿನ್ನಗಿರಿ
179)ಜುಬೆರುಲ್ಲ
180)ಕೃಷ್ಣಪ್ಪ
181)ಮುನಿಯಪ್ಪ
182)ಹೊನ್ನಪ್ಪ
183)ಶ್ರೀಮತಿ ಸರಸ್ವತಿ
184)ರಾಮ ಬೋವಿ.
185)ಧನರಾಜು
186)ಪ್ರದೀಪ್ ಸಿಂಗ್
187)ನಾಗರಾಜ
188)ಸುಬ್ರಮಣಿ
189)ದಳಸಾಬ್
190)ಮಸಲಾಮಣಿ
191)ಕಮಾರಿ ರಶ್ಮಿ
192)ವದಪಲ್ಲಿ ಮುರುಗಯ್ಯ
193)ಪ್ರಭಾಕರನ್
194)ಡಿ. ಲಕ್ಷ್ಮಿ
195)ಸುಬ್ಬಣ್ಣ ಪೂಜಾರಿ
196)ಮಹಾದೇವ. ಎಸ್.
197)ಶ್ರೀಮತಿ ಪ್ರಭ
198)ಶಬ್ಬೀರ್
199)ಪತ್ಯಾಪನ್

ಬೆಂಗಳೂರು ನಗರದಲ್ಲಿ ನಗರಪಾಲಿಕೆಯ ಶಿಶುವಿಹಾರ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳು.

2625 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ನಗರಪಾಲಿಕೆಯ ಶಿಶುವಿಹಾರ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಎಷ್ಟು?

ಅ) ಶಾಲೆಗಳನ್ನು ನಿರ್ವಹಿಸಲು, ವೇತನ ಇತ್ಯಾದಿ ಸೇರಿದಂತೆ ಬೋಧನೆ ಮತ್ತು ಇತರೆ ಉದ್ದೇಶಗಳಿಗಾಗಿ 1990-91ನೇ ಸಾಲಿನ ಒಟ್ಟು ವೆಚ್ಚ?

ಇ) ಈ ಶಾಲೆಗಳನ್ನು ನಡೆಸುವ ಸಲುವಾಗಿ ಖರ್ಚು ಮಾಡಿದ ಎಲ್ಲಾ ವೆಚ್ಚವನ್ನು ಸರ್ಕಾರ ಹಣ ಭರ್ತಿ ಹಾಕಿ ಕೊಟ್ಟಿದೆಯೇ?

ಈ) ಹಾಗಿಲ್ಲದಿದ್ದಲ್ಲಿ ಈ ನಗರಪಾಲಿಕೆಯ ಶಾಲೆಗಳನ್ನು ಸರ್ಕಾರಕ್ಕೆ ವಹಿಸಿಕೊಡಲು ಏನಾದರೂ ಪ್ರಸ್ತಾವನೆ ಇದೆಯೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) 1) ಶಿಶುವಿಹಾರಗಳು 75

2) ಪ್ರಾಥಮಿಕ ಶಾಲೆಗಳು 8

3) ಪ್ರೌಢಶಾಲೆಗಳು 33

ಆ) ರೂ. 4,27,83,000-00

ಇ) ಅನುಧಾನ ಸಂಹಿತೆ ಪ್ರಕಾರ 1985ಕ್ಕೆ ಮುಂಚೆ ಪ್ರಾರಂಭವಾದ ಹಾಗೂ 1985ರ ನಂತರ ಪ್ರಾರಂಭಿಸಲಾದ ನಗರಪಾಲಿಕೆಯ ಶಾಲಾ ಮತ್ತು ಕಾಲೇಜುಗಳು ಕ್ರಮವಾಗಿ ಪ್ರಾರಂಭಿಸಿದ 5 ಮತ್ತು 7 ವರ್ಷಗಳ ನಂತರ, ಅನುದಾನವನ್ನು ಪಡೆಯುವ ಅರ್ಹತೆ ಹೊಂದಿರುತ್ತವೆ. 1979-80ರಿಂದ ಬೆಂಗಳೂರು ಮಹಾನಗರ ಪಾಲಿಕೆಗೆ 11,214,20,000 ರೂ. ಅನುದಾನ ಬರಬೇಕಾಗಿದ್ದು ಸರ್ಕಾರಕ್ಕೆ 89-90ರ ವರೆಗೆ 9,24,86,494-52ರೂ.ಗಳ ಶಿಕ್ಷಣ ತೆರಿಗೆಯನ್ನು ನಗರಪಾಲಿಕೆಯು ಕಟ್ಟಬೇಕಾಗಿದೆ. ಇದನ್ನು ನಗರಪಾಲಿಕೆಗೆ ಕೊಡಬೇಕಾದ ಅನುಧಾನದಲ್ಲಿ ಕಡಿತಗೊಳಿಸಿದರೆ, ಬೆಂಗಳೂರು, ಮಹಾನಗರ ಪಾಲಿಕೆಗೆ, 1,99,33,505-48 ರೂ. ಅನುಧಾನ ಬರಬೇಕಾಗಿದೆ.

ಬೆಂಗಳೂರು ಮಹಾನಗರ ಪಾಲಿಕೆಯ ಖರೀದಿಸಿದ ಮಾರುತಿ ವ್ಯಾನು ಮತ್ತು ಕಾರುಗಳು

2623 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕೇಪೇಟೆ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಬೆಂಗಳೂರು ಮಹಾನಗರ ಪಾಲಿಕೆಯು ಖರೀದಿಸಿದ ಮಾರುತಿ ವ್ಯಾನು ಕಾರುಗಳ ಸಂಖ್ಯೆ ಎಷ್ಟು?

ಆ) 30-6-91ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿದ್ದ ಮಾರುತಿ ವ್ಯಾನು ಕಾರುಗಳ ಒಟ್ಟು ಸಂಖ್ಯೆ ಎಷ್ಟು?

ಇ) ಈ ಮಾರುತಿ ವ್ಯಾನು ಕಾರುಗಳನ್ನು ಖರೀದಿಸಲು ಸಂದಾಯ ಮಾಡಿದ ಹಣವೆಷ್ಟು?

ಈ) ಮಾರುತಿ ವ್ಯಾನು ಕಾರುಗಳಿಗಾಗಿ ಬದಲಾಯಿಸಿದ ಹಳೆಯ ಕಾರುಗಳನ್ನು ಹರಾಜು ಹಾಕಲಾಗಿತ್ತೆ?

ಉ) ಹಾಗಿದ್ದರೆ ಎಷ್ಟು ಕಾರುಗಳನ್ನು ಹರಾಜು ಹಾಕಲಾಗಿದೆ ಮತ್ತು ಇದರಿಂದ ಉತ್ಪತ್ತಿಯಾದ ಹಣ ವೆಷ್ಟು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) 30

ಆ) 31

ಇ) ರೂ. 37,35, 570-00